**ಯೊಹಾನಾ ಕರ್ವಹಾಲ್
ಕವಿತೆಗಳು**

# ನಾನೇ ರಕ್ತ

ಮಾಲ್ವಿನಾಸ್‌ನಲ್ಲಿ ಚೆಲ್ಲಿದ ರಕ್ತ ನಾನು
ಪೆಸಿಫಿಕ್ ಮಹಾಸಾಗರದ ಪ್ರವಾಹದಡಿಯಲಿ
ಉಕ್ಕಿಹರಿದ ರಕ್ತ.
ನನ್ನ ಗುಬ್ಬಚ್ಚಿ ಸ್ನೇಹಿತ ಮತ್ತವನ ಕನಸಿನಲ್ಲೂ
ಜೀವಿಸುವ ರಕ್ತ.

ನನ್ನ ತಾಯಿಯ ದೇಹದೊಳಗೆಲ್ಲಾ ಹರಿದ ರಕ್ತ
ನಾನು
ನನಗೆ ಜನ್ಮ ಕೊಟ್ಟಾಗ ಆಕೆ
ನಾನೇ ಅವಳ ಕೂಗು, ಅವಳ ಕಣ್ಣೀರು

ಅರಿಯದೆ ಹಿಡಿದ ತಪ್ಪು ದಾರಿಯೇ
ಯಾರ ಬದುಕಿನ ಬಹುದೊಡ್ಡ
ಪ್ರಮಾದವಾಗಿತ್ತೋ
ಅಂಥಾ ಎಳೆ ಹುಡುಗಿಯ ಅರಿವುಗೇಡಿ ರಕ್ತ
ನಾನು

ಹೌದು
ಆ ಅಪ್ರಾಪ್ತ ಬಾಲಕಿಯ
ಉಟ್ಟ ಬಟ್ಟೆಯ ಮೇಲೆ ಕಲೆಯಾಗಿ ಅರಳಿದ
ನಿತ್ಯ ವಸಂತ ಪುಷ್ಪ

ಯುದ್ಧ ಮುಗಿಸಿ ಮರಳಿದ
ಮನುಷ್ಯನ ಗಾಯಗಳಲ್ಲಿ ಹೆಪ್ಪುಗಟ್ಟಿಯೂ
ಗಾಯಗೊಂಡವರಿಗೆ ಸಾಂತ್ವನ ನೀಡುವ
ದುರ್ವಾಸನೆಯ ರಕ್ತ

ನಿಜರೂಪದಲ್ಲಿ ನಾನು ಕೆಂಪಿನಲೇ ಕಡುಗೆಂಪು
ಬಣ್ಣ
ಹಸಿವು ತಿನ್ನುವವರ ದೇಹವನ್ನು
ಇಂಚು ಇಂಚಾಗಿ
ಹಸಿವು ತಿನ್ನದಂತೆ ಪೋಷಿಸುವ ರಕ್ತ ನಾನು
ಅವರ ರಾತ್ರಿಯ ಪವಿತ್ರ ಭೋಜನ

ಬೇಟೆಗಾರನಿಂದ
ನಿರ್ದಯವಾಗಿ ಬೇಟೆಯಾಡಲ್ಪಟ್ಟ ಜಿಂಕೆಯ ರಕ್ತ
ನಾನು
ಅಂತ್ಯವಿಲ್ಲದ ಹಳ್ಳಿಯ ಪಾಳು ಗೋಡೆಗಳನ್ನು
ಬಣ್ಣಿಸುವ ರಕ್ತ

ತನ್ನ ಪಾಳಿ ಮುಗಿಸಿ
ಪಾತಾಳಲೋಕದಿಂದ ಮಕ್ಕಳಿಗೆ
ಒಣ ರೊಟ್ಟಿ ಎಬ್ಬಿ ತರುವ
ಗಣಿ ಕಾರ್ಮಿಕನ ರಕ್ತ ಮತ್ತವನ
ಗುಣಪಡಿಸಲಾಗದ ಆಯಾಸ

ಆದರ ಶುದ್ಧ ವೈಭವದಲ್ಲಿ ನಾನೇ ಚೆಲುವು
ನಾನೇ ಸದ್ಯ, ನಾನೇ ಶಾಶ್ವತ, ನಾನೇ ಅನಂತ
ಮತ್ತು ನಾನೇ ಅದರ ಪುನರಾಗಮನ
ನಾನು ಲ್ಯಾಟಿನ್ ಅಮೆರಿಕದ ರಕ್ತ

# ನೆನಪು

ಮತ್ತೆ ಹೂವುಗಳೆಂದರೆ ಹೆಚ್ಚೇನಲ್ಲ
ಲೋಕದ ಜಂಜಾಟದಲಿ
ಗೈರುಹಾಜರಾಗುವ ಹುಚ್ಚು ಪ್ರಲಾಪ

ಬದುಕು ಬತ್ತಿ ಹೋಗುತ್ತದೆ
ನಿನ್ನೆಯ ಬಿರಿದ ಕಂಗಳಲ್ಲಿ
ನೆನಪಾಗಿ

# ವೇದನೆ

ಎದೆಯಲಿ ಉರಿವ ಸೂರ್ಯ
ವೇದನೆಯ ದನಿ
ಎರಡು ಕಾಯಗಳ ನಡುವೆ
ಗಾಳಿಯ ನುಸುಳಲು ಬಿಡದು